## ಪೋಷಕರ ಜವಾಬ್ದಾರಿ

ಜಾಗತೀಕರಣದ ಈ ಯುಗದಲ್ಲಿ ನಮ್ಮ ಜೀವನದ ಹಲವು ನಿರ್ಧಾರಗಳನ್ನು ನಮ್ಮ ಆರ್ಥಿಕ ಪರಿಸ್ಥಿತಿಯೇ ಪ್ರೇರೇಪಿಸುತ್ತದೆ. ನಮ್ಮ ಮಕ್ಕಳ ಪೋಷಣೆ ಇಂದು ನಾವು ಮಾಡಬೇಕಾದ ಹಲವು ನಿರ್ಧಾರಗಳಲ್ಲಿ ಒಂದು. ಕೆಲಸಕ್ಕೆ ಹೋಗುವ ತಂದೆ ತಾಯಿಯರು, ತಮ್ಮ ಮಕ್ಕಳನ್ನು ಯಾವುದೇ ನಂಬಿಕಸ್ಥ ವ್ಯಕ್ತಿಯ ಹತ್ತಿರ, ಇಲ್ಲವೇ 'ಪ್ಲೇ ಹೋಮ್' ನಲ್ಲಿ ಬಿಡುವ ವ್ಯವಸ್ಥೆ—ಪರೋಕ್ಷ ಪೋಷಣೆ—ಇಂದು ಸರ್ವೇಸಾಮಾನ್ಯ.

ಮೇಲ್ನೋಟಕ್ಕೆ ಇಂದಿನ ಪರಿಸ್ಥಿತಿಗೆ ಇದು ಅತ್ಯಂತ ಸೂಕ್ತ ಎಂದು ಎನಿಸಿದರೂ ಇಂಥ ಸಂದರ್ಭಗಳಲ್ಲಿ ನಡೆಯುವ ಕೆಲವು ಘಟನೆಗಳು ಮಕ್ಕಳ ಸೂಕ್ಷ್ಮ ಮನಸ್ಸಿನಲ್ಲಿ ಕರಾಳ ಛಾಯೆಯನ್ನು ಬಿಡಬಹುದು. ಭಾವನಾತ್ಮಕವಾಗಿಯೂ ದೈಹಿಕವಾಗಿಯೂ ಎಳೆಯರಾದ ಮಕ್ಕಳು ಸುಲಭವಾಗಿ ಮಾನಸಿಕ ಇಲ್ಲವೇ ದೈಹಿಕ ಶೋಷಣೆಗೆ ಗುರಿಯಾಗುತ್ತಾರೆ. ಅವರಲ್ಲಿ ಲಿಂಗಭೇದ ಜ್ಞಾನವಿನ್ನೂ ಮೂಡಿರುವುದಿಲ್ಲವಾದ್ದರಿಂದ ಈ ಸಮಸ್ಯೆ ಇನ್ನಷ್ಟು ಗಾಢವೂ ಜಟಿಲವೂ ಆಗುತ್ತದೆ. ಇಂಥ ಕಷ್ಟಕರ ಪರಿಸ್ಥಿತಿಯಲ್ಲಿ ಮಕ್ಕಳು ತಮ್ಮ ತಂದೆತಾಯಿಯರ ಆಸರೆಯನ್ನೇ ಬಯಸುತ್ತಾರೆ. ಆಗ ಅವರಿಗೆ ತಂದೆತಾಯಿಯರ ಸಹಾಯದ ಬದಲು ನಿರ್ಲಕ್ಷ್ಯ, ಆರೋಪಿತ ವ್ಯಕ್ತಿ 'ನಂಬಿಕಸ್ಥ' ನೆಂಬ ಪ್ರತಿವಾದಗಳು ದೊರೆತರೆ, ಅವರು ತಮ್ಮ ದುಃಖದಲ್ಲಿ ಬಂಧಿತರಾಗಿ ಮುಂದೆ ಖಿನ್ನತೆ, ಮಾನಸಿಕ ದೌರ್ಬಲ್ಯಗಳಿಗೆ ಗುರಿಯಾಗಬಹುದು.

ಬೆಳೆಯುವ ಮಕ್ಕಳಿಗೆ ಆತ್ಮವಿಶ್ವಾಸ ಆತ್ಮಾಭಿಮಾನಗಳು ದೊರಕುವುದು ಬಹಳ ಮಟ್ಟಿಗೆ ಪೋಷಕರ ಪ್ರೋತ್ಸಾಹದಿಂದ. ತಮ್ಮ ಚಿಂತೆಗಳಲ್ಲಿ ಮುಳುಗಿರುವ ತಂದೆತಾಯಿಯರು ಮಕ್ಕಳ ಗೆಲವುಗಳನ್ನು ಹೃತ್ಪೂರ್ವಕ ಪ್ರಶಂಸಿಸದೆ, ಸೋಲಿನಲ್ಲಿ ಸಮಾಧಾನಪಡಿಸದೆ ಹೋದರೆ ಅಥವಾ ಇತರರೊಡನೆ ಸದಾ ಹೋಲಿಸಿ ನೇತ್ಯಾತ್ಮಕ ಭಾವನೆಗಳನ್ನೇ ಬಿತ್ತಿದರೆ ಅಂಥ ಪ್ರಸಂಗಗಳು ಮಕ್ಕಳ ಜೀವನದ ಮೇಲೆ ಹಲವು ದೀರ್ಘಕಾಲದ ದುಷ್ಪರಿಣಾಮಗಳನ್ನು ಬೀರುತ್ತವೆ. ನಿರಾಶಾಭಾವ, ತಂದೆತಾಯಿಯರ ಮೇಲೆ ಕೋಪ, ಆಕ್ರೋಶ ಬಹಳವಾಗಿ ಇಂಥ ಕಾರಣಗಳಿಂದಲೇ ಹುಟ್ಟುತ್ತವೆ. ಇಂತಹ ಮಕ್ಕಳು ತಮ್ಮ ಜೀವನದ ಮಾದರಿಯಾಗಿ ಧಾರಾವಾಹಿಗಳ ಪಾತ್ರಗಳನ್ನು, ಚಲನಚಿತ್ರದ ನಾಯಕನಾಯಕಿಯರನ್ನು, ಖಳನಾಯಕರನ್ನು, ಕೆಟ್ಟ ಸ್ನೇಹಿತರನ್ನು ಅನುಕರಿಸಿ ನಕಾರಾತ್ಮಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬಹುದು.

ತಂದೆತಾಯಿಗಳು ತಮ್ಮ ವಿಶಿಷ್ಟ ಸ್ಥಾನವನ್ನು ಸರಿಯಾಗಿ ಬಳಸದೆ ಹೋದರೆ ಇಂಥ ಹಲವು ತೊಂದರೆಗಳು ಎದುರಾಗುತ್ತವೆ. ಮಕ್ಕಳ ಸಂತೋಷಕ್ಕೆಂದು ದುಡಿಯುವಾಗ ನಾವು ಅರಿತಿರಬೇಕಾದ ಮಹತ್ವದ ವಿಚಾರವೆಂದರೆ—ಮಕ್ಕಳಿಗೆ ನಾವು ಒದಗಿಸುವ ಸೌಲಭ್ಯಗಳಂತೆಯೇ ನಮ್ಮ ಪ್ರೀತಿ, ವಿಶ್ವಾಸ, ಪ್ರೋತ್ಸಾಹಗಳೂ ಅತಿ ಮುಖ್ಯ; ಹಣ ಅವರಿಗೆ ಬೇಕಾದ ವಸ್ತುಗಳನ್ನು ಕೊಡುತ್ತವೆ, ಆದರೆ ನಮ್ಮ ಪ್ರೀತಿ, ಸಹನೆಗಳು ಅವರ ವ್ಯಕ್ತಿತ್ವವನ್ನು ರೂಪಿಸುತ್ತವೆ.

(*ಸಂಗ್ರಹ*: ಶ್ರೀ ನಿಕಿ ನಾಚಪ್ಪ, ಮೈಸೂರು)

ವಾರ್ತಾ ವಿಶ್ಲೇಷಣೆ

## ವೃದ್ಧರ ಮೇಲೆ ದೌರ್ಜನ್ಯ

ಮಾತೃದೇವೋ ಭವ, ಪಿತೃದೇವೋ ಭವ— 'ತಾಯಿಯನ್ನು ದೇವರಂತೆ ಕಾಣು, ತಂದೆಯನ್ನು ದೇವರಂತೆ ಕಾಣು'—ಎನ್ನುವ ಪರಂಪರೆ ನಮ್ಮದು. ಆ ತಂದೆ ತಾಯಿಗಳೇ ಈಗ ಅನೇಕ ಮನೆಗಳಲ್ಲಿ ತಮ್ಮ ವೃದ್ಧಾಪ್ಯದಲ್ಲಿ ತೀವ್ರವಾದ ಮಾನಸಿಕ ತುಮುಲ ಮತ್ತು ಒತ್ತಡಗಳಿಗೆ ಸಿಲುಕಿ ಮೂಕ ವೇದನೆಯನ್ನು ಅನುಭವಿಸುತ್ತಿದ್ದಾರೆ ಎಂದರೆ ಆಶ್ಚರ್ಯವಲ್ಲವೆ? ಅದಕ್ಕೆ ಕಾರಣ ಅವರ ಒಂಟಿತನ. ಮಕ್ಕಳಿಂದ ದೂರವಾಗಿ ಬಾಳುತ್ತಿರುವ ಸಾವಿರಾರು ಜನ ದಂಪತಿಗಳು ತಮ್ಮ ಇಳಿವಯಸ್ಸಿನಲ್ಲಿ ಸಿರಿಸಂಪದಗಳ ನಡುವೆ ಇದ್ದರೂ ಕೂಡ ಭಯದ ಭಾವನೆಯಿಂದ ನರಳುತ್ತಿದ್ದಾರೆ. ಅದಕ್ಕೆ ಕಾರಣವೆಂದರೆ ಈಚೆಗೆ ವೃದ್ಧರ ಮೇಲೆ ಹೆಚ್ಚಾಗುತ್ತಿರುವ ದೌರ್ಜನ್ಯ. ವೃದ್ಧರ ಬಳಿ ಇರಬಹುದಾದ ಆಭರಣಗಳು ಮತ್ತು ಹಣದ ಆಮಿಷಕ್ಕೆ ಒಳಗಾಗಿ ಮನೆಕೆಲಸದವರು ಅಥವಾ ಅಡುಗೆಯವರೇ ಅವರನ್ನು ಕೊಂದು ಹಣ ದೋಚಿರುವ ಘಟನೆಗಳು ದೊಡ್ಡ ದೊಡ್ಡ ನಗರಗಳಲ್ಲಿ ಹೆಚ್ಚುತ್ತ ಇರುವುದನ್ನು *The Week* ವಾರಪತ್ರಿಕೆ ತನ್ನ ಇತ್ತೀಚಿನ ಸಂಚಿಕೆಯಲ್ಲಿ ವರದಿ ಮಾಡಿದೆ. ಇಳಿ ವಯಸ್ಸಿನಲ್ಲಿ ತಮ್ಮ ಜೀವವನ್ನು ಸಂರಕ್ಷಿಸಿಕೊಳ್ಳಲು ವೃದ್ಧರು ವಿವಿಧ ಮಾರ್ಗೋಪಾಯಗಳ ಮೊರೆ ಹೋಗಬೇಕಾಗಿದೆ. ಅದರಲ್ಲಿ ಆಧುನಿಕ ಎಲೆಕ್ಟ್ರಾನಿಕ್ ಸಾಧನಗಳು ಮತ್ತು ರಿವಾಲ್ವರ್‌ಗಳೂ ಸೇರಿವೆ ಎಂದರೆ ಸಮಸ್ಯೆ ಎಷ್ಟು ಗಂಭೀರವಾಗಿದೆ ಎಂಬುದರ ಅರಿವಾಗುತ್ತದೆ. ಶಾಂತಿ, ಸಂತೃಪ್ತಿಗಳಿಂದ ವಿಶ್ರಾಂತ ಜೀವನ ನಡೆಸಬೇಕಾದ ಈ ವಯೋವೃದ್ಧರ ಕರುಣಾಜನಕ ಸ್ಥಿತಿ, ನಮ್ಮ ಸಮಾಜದ ಮೇಲೆ ಬಡಿದ ಕಳಂಕವಲ್ಲವೇ?

ಇದಕ್ಕೆ ಮೂಲಭೂತ ಕಾರಣ ಪಾರಂಪರಿಕ ನೈತಿಕ. ಸಾಮಾಜಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಅವಸಾನ. ನಾವು ಯಾವ ಮೌಲ್ಯಗಳಿಗನುಸಾರವಾಗಿ ಜೀವನ ಸಾಗಿಸುತ್ತೇವೆಯೋ, ನಮ್ಮ ಮುಂದಿನ ಪೀಳಿಗೆಯನ್ನು ಬೆಳೆಸುತ್ತೇವೆಯೋ ಆ ಮೌಲ್ಯಗಳ ಸ್ವಾಭಾವಿಕ ಪರಿಣಾಮವನ್ನು ವೃದ್ಧಾಪ್ಯದಲ್ಲಿ ಕಾಣುತ್ತೇವೆ. ಕೇವಲ ಹಣ, ಪ್ರತಿಷ್ಠೆ, ಅಧಿಕಾರ, ಭೋಗ – ಇವುಗಳೇ ನಮ್ಮ ಮೌಲ್ಯಗಳಾಗಿದ್ದರೆ ನಮ್ಮ ಮಕ್ಕಳೂ ಅವಕ್ಕೇ ಇನ್ನಿಲ್ಲದ ಮಹತ್ವ ಕೊಟ್ಟು ನಮ್ಮನ್ನು ಕಡೆಗಣಿಸುತ್ತಾರೆ. 'ಮಾಡಿದ್ದುಣ್ಣೋ ಮಹಾರಾಯ' ಎಂಬ ಗಾದೆ ಇಲ್ಲಿಗೆ ಚೆನ್ನಾಗಿ ಒಪ್ಪುತ್ತದೆ. ಆದ್ದರಿಂದ ನಮ್ಮ ಮುಂದಿರುವ ಆದ್ಯ ಕರ್ತವ್ಯ ಎಂದರೆ ಉನ್ನತ ಮೌಲ್ಯಗಳ ಪ್ರಕಾರ ಜೀವನ ನಿರ್ವಹಣೆ. ನಮ್ಮ ಮಕ್ಕಳಿಗೆ ಆ ಮೌಲ್ಯಗಳ ಬೆಳಕಿನಲ್ಲಿ ಮಾರ್ಗದರ್ಶನ ನೀಡಿದಾಗ ಮಾತ್ರವೇ ಇಂಥ ವ್ಯಾಧಿಗಳಿಂದ ನಮ್ಮ ಸಮಾಜ ಮುಕ್ತವಾಗಲು ಸಾಧ್ಯ.

ಉನ್ನತ ಮೌಲ್ಯಗಳು ಮೂಡಿಬರುವುದು ಆಧ್ಯಾತ್ಮಿಕ ತತ್ತ್ವದ ಬೆಳಕಿನಲ್ಲಿ ಜೀವನವನ್ನು ರೂಪಿಸಿಕೊಂಡಾಗ ಮಾತ್ರ. ಕಾರಣ ಎಲ್ಲ ನೈತಿಕ ಮೌಲ್ಯಗಳ ನೆಲೆಯಿರುವುದು ಅಧ್ಯಾತ್ಮದಲ್ಲಿ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.